ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ: ಎರಡು ದಿವಸ ಬಿಟ್ಟರೆ ಅಲ್ಲಿ ದೊಡ್ಡ ಅನಾಹುತವಾಗುತ್ತದೆ. ಏನಾಗುತ್ತದೆಂದರೆ, ನಾಳೆ ಪೊಲೀಸ್ ಡಿಪಾರ್ಟ್‌ಮೆಂಟ್‌ನವರು ಅಲ್ಲಿಗೆ ಬಂದು ಹಿಂಸೆ ಕೊಡುತ್ತಾರೆ. ಅದಕ್ಕಾಗಿ ನೀವು ಈ ದಿವಸ ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅದೇಶ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ (ಸಂತೇಮರಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಸತಿ ಸಚಿವರ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. 2003–04ನೇ ಸಾಲಿನ ಆಶ್ರಯ ಅಂಬೇಡ್ಕರ್ ಮನೆಗಳೇನಿವೆ, ನಮ್ಮ ಭಾಗವಾದ ಚಾಮರಾಜನಗರ ತಾಲೂಕಿನಲ್ಲಿ ಮತ್ತು ಬಹಳಷ್ಟು ಕ್ಷೇತ್ರಗಳಲ್ಲಿ ನಾವು ಅವರಿಗೆ ಹಕ್ಕುಪತ್ರ ಕೊಟ್ಟು ಒಂದು ವರ್ಷ ಕಳೆದಿದೆ. ಮನೆಯನ್ನು ಕೂಡ ಅವರು ಕಟ್ಟಿದ್ದಾರೆ. ಆದರೆ ಅವರ ಬಿಲ್ಲಿಗೆ ಒಂದು ನಯಾಪೈಸೆ ಹಣವನ್ನು ನಾವು ಪಾವತಿಸಿಲ್ಲ. ನಾವು ಅವರಿಗೆ ಕೊಡತಕ್ಕಂಥದ್ದು 20 ಸಾವಿರ ರೂಪಾಯಿಗಳು. ಪ್ರತಿದಿನ ಆ ಬಡವರು ತಾಲೂಕು ಕಚೇರಿಗಳಿಗೆ ಅಲೆಯತಕ್ಕಂಥ ವಾತಾವರಣ ಉಂಟಾಗಿದೆ. ಇದುವರೆವಿಗೆ ಚಾಮರಾಜನಗರ ತಾಲೂಕಿನ ಆ ಬಡ ಫಲಾನುಭವಿಗಳಿಗೆ ಸುಮಾರು 45 ಲಕ್ಷ ರೂಪಾಯಿಗಳನ್ನು ಕೊಡಬೇಕಾದಂಥ ಪರಿಸ್ಥಿತಿ ಇದೆ. 2003–04ನೇ ಸಾಲಿನ ಮನೆಗಳಿಗೆ ಇದುವರೆವಿಗೂ ಕೂಡ ಒಂದು ನಯಾಪೈಸೆಯನ್ನು ಸಹ ಸರ್ಕಾರದಿಂದ ಆ ಬಡವರಿಗೆ ಪಾವತಿಸಿಲ್ಲ. ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಸಹ ತಂದಿದ್ದೇನೆ ಮತ್ತು ಅಧಿಕಾರಿಗಳ ಗಮನಕ್ಕೂ ತಂದಂಥ ಸಂದರ್ಭದಲ್ಲಿ ಅವರು ಹೆಳುವುದೇನೆಂದರೆ, 1993ರಿಂದ 1998ನೇ ಇಸವಿಯವರೆಗೆ ಕೂಡ registration ಮಾಡಿಲ್ಲ ಎಂದು ಹೇಳುತ್ತಾರೆ. ಆದರೆ 1998ರಿಂದ 2004ರ ವರೆಗೆ 100 ಪರ್ಸೆಂಟ್ registration ಆಗಿದೆ. 1993–1998ರವರೆಗೆ ಯಾರೋ ಅಧಿಕಾರಿಗಳು ಮಾಡದೇ ಇದ್ದಂಥ ಕೆಲಸವನ್ನು ಆ ಬಡವರ ಮೇಲೆ ಹಾಕತಕ್ಕಂಥದ್ದು ಸಲ್ಲದು, ದಯಮಾಡಿ ತತ್‌ಕ್ಷಣ 45 ಲಕ್ಷ ರೂಪಾಯಿಗಳನ್ನು ನಮ್ಮ ಚಾಮರಾಜನಗರ ತಾಲೂಕುಗಳಿಗೆ ಮತ್ತು ಬಹಳಷ್ಟು ಶಾಸಕರನ್ನು ನಾನು ಕೇಳಿದ್ದೇನೆ. ಬಹಳಷ್ಟು ಕಡೆ ಆಶ್ರಯ, ಅಂಬೇಡ್ಕರ್ ಮನೆಗಳಿಗೆ 2003–04ನೇ ಸಾಲಿನಲ್ಲಿ ಇದುವರೆವಿಗೆ ಕೂಡ ಹಣ ಬಿಡುಗಡೆಯಾಗಿಲ್ಲ. ದಯಮಾಡಿ, ತಕ್ಷಣ ಸಂಬಂಧಪಟ್ಟ ಸಚಿವರು ಕ್ರಮ ತೆಗೆದುಕೊಂಡು ಆ ಹಣವನ್ನು ಬಿಡುಗಡೆ ಮಾಡಿ ಬಡ ಫಲಾನುಭವಿಗಳಿಗೆ ಆ ಹಣವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ: ಮಾನ್ಯ ಅಧ್ಯಕ್ಷರೆ ನಾನು ಏನೂ ಕೇಳುವುದಕ್ಕೆ ಎದ್ದು ನಿಂತಿಲ್ಲ.

ಅಧ್ಯಕ್ಷರು: ಏನು ಕಾರಜೋಳರವರೆ, ಏಕೆ ಹೀಗೆ ಮಾಡುತ್ತೀರಿ?

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ: ದಯಮಾಡಿ ಈ ರೀತಿ ಸದನ ನಡೆಸುವುದು ಬೇಡ. ಯಾರ ಮುಂದೆ ಹೇಳುವುದು? ಏಕೆ ಸುಮ್ಮನೆ ಗಂಟಲು ಹರಿದುಕೊಳ್ಳಬೇಕು? ಉತ್ತರ ಕೊಡುವವರು ಯಾರಿದ್ದಾರೆ? ಸಂಬಂಧಪಟ್ಟ ಸಚಿವರು ಇಲ್ಲಿ ಇಲ್ಲ. ಅಧಿಕಾರಿಗಳು ಇಲ್ಲ.

(ಗೊಂದಲ)

ಅಧ್ಯಕ್ಷರು: ಉತ್ತರ ಕೊಡುವವರು ಎಲ್ಲ ಇರುವುದಿಲ್ಲ ಇದು ಶೂನ್ಯವೇಳೆ. ಈ ರೀತಿ ಹೇಳಿದರೆ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ನಿಮಗೆ ಅವರವರ ಬಾಯಿಂದಲೇ ನಿಮಗೆ ಇಷ್ಟ ಬಂದ ರೀತಿ ಉತ್ತರ ಕೊಡಿಸುವುದಕ್ಕೆ ಸಾಧ್ಯ ಆಗುವುದಿಲ್ಲ.

(ಗೊಂದಲ)

ಶ್ರೀ ಯಡಿಯೂರಪ್ಪನವರೆ, ಉಪನಾಯಕರಿಗೆ ಹೇಳಿ? ಈ ರೀತಿ ಆದರೆ ಸದನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲದಕ್ಕೂ ಅವರು ಬಂದು ಇಷ್ಟ ಬಂದ ರೀತಿಯಲ್ಲಿ ಮಾತನಾಡಿದರೆ ಏನಿದು?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ.

ಅಧ್ಯಕ್ಷರು: ಬೇಸರ ಮಾಡಿಕೊಳ್ಳುವುದಲ್ಲ. ಬೇಸರ ಮಾಡುವ ರೀತಿಯಲ್ಲಿ ಮಾಡುತ್ತಿದ್ದಾರೆ No, no.

(ಗೊಂದಲ)

ಶ್ರೀ ಗೋವಿಂದ ವೆಂಕಟಪ್ಪ ಕಾರಜೋಳ: ನಾವು ಬೇಸರ ಮಾಡಬೇಕೆಂದು ಹೇಳಿದ್ದಲ್ಲ. ತಾವೇ ನೋಡಿ.

ಅಧ್ಯಕ್ಷರು: ಆಯಿತು ಸ್ವಾಮಿ ಅದನ್ನು ಎಷ್ಟು ಸಲ ಹೇಳುತ್ತೀರಿ? ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಶ್ರೀ ಗೋವಿಂದ ಕಾರಜೋಳರವರ ಕಳಕಳಿಯನ್ನು ನಿಮ್ಮ ಮುಂದೆ ಅಲ್ಲದೆ ಬೇರೆ ಯಾರ ಹತ್ತಿರ ಹೇಳುವುದು.

ಅಧ್ಯಕ್ಷರು: ಅರ್ಥವಾಗುತ್ತದೆ ಸ್ವಾಮಿ, ಬಹಳ ಜನ ಸದಸ್ಯರು ಬಹಳಷ್ಟು ಕ್ಷೇತ್ರಗಳ ಸಮಸ್ಯೆಯನ್ನು ಶೂನ್ಯ ವೇಳೆಯಲ್ಲಿ ಮಾತನಾಡಬೇಕೆಂದು ಕೊಟ್ಟಿದ್ದಾರೆ. ಅದಕ್ಕೋಸ್ಕರ

ಎಲ್ಲರಿಗೆ ಅವಕಾಶವನ್ನು ಕೊಡುತ್ತಿದ್ದೇನೆ. ಎಲ್ಲ ಸಂಬಂಧಪಟ್ಟ ಮಂತ್ರಿ ಇರುವುದಕ್ಕೆ ಸಾಧ್ಯವೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದ್ನಿಮಿಷ ಸಾರ್, ಶ್ರೀ ಗೋವಿಂದ ಕಾರಜೋಳರವರ ಕಳಕಳಿ, ಅವರು ಏನೋ ವಿಷಯ ಪ್ರಸ್ತಾಪ ಮಾಡುವುದಕ್ಕೆ ಕೇಳಲಿಲ್ಲ. ನಮ್ಮ ವಿನಂತಿ ಏನೆಂದರೆ ಇಷ್ಟೊಂದು ಒಳ್ಳೆಯ ಅವಕಾಶಗಳನ್ನು ಸಭಾಪೀಠದಲ್ಲಿ ಕುಳಿತುಕೊಂಡು ಕೊಡುತ್ತಿದ್ದೀರಿ. ನಮ್ಮನ್ನು ಉಳಿಸಿರುವವರೇ ನೀವು. ಶಾಸಕರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾದರೂ ಕೊನೆಯಪಕ್ಷ ಈ ಪ್ರಶ್ನೆ ಕೇಳಿದರು ಎಂದು ಆ ಕ್ಷೇತ್ರದ ಜನರಿಗೆ ಸಮಾಧಾನ ಆಗುವುದಕ್ಕಾದರೂ ಅವಕಾಶ ಕೊಟ್ಟಿದ್ದೀರಿ. ನಾನು ಮಾನ್ಯ ಹಿರಿಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರನ್ನು ಕೇಳುತ್ತೇನೆ. Zero hour ಅತ್ಯಂತ ಪ್ರಮುಖವಾದುದು. ಕೆಲವು ವಿಷಯಗಳಿಗೆ ಉತ್ತರವನ್ನು ಅಲ್ಲಿಯೇ ಕೊಡುವುದಕ್ಕೆ ಆಗದಿರಬಹುದು. ಆದರೆ ಮೊದಲನೆಯ ಸಾಲಿನಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಬಿಟ್ಟರೆ ಬೇರೆ ಯಾವ ಮಂತ್ರಿಗಳೂ ಇಲ್ಲ ಎನ್ನುವುದಾದರೆ ಈ ಸದನದ ಬಗ್ಗೆ ಏನಾದರೂ ಗೌರವ ಇದೆಯೆ? ಅಥವಾ ಇನ್ನೇನಾದರೂ ವಿಶೇಷವಾದ ಕಾರ್ಯಕ್ರಮ ಇದ್ದರೆ ನಮಗೆ ಅರ್ಥವಾಗುತ್ತದೆ. ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಗಮನಿಸಬೇಕು. ಈ ಕಡೆ ಸಂಖ್ಯೆ ನೋಡಿ. ಮೊದಲನೇ ಸಾಲಿನಲ್ಲಿರಬಹುದು, ಈ ಕೋರಂ ಅನ್ನು ಉಂಟು ಮಾಡುವವರು ನಾವೇ. ವಿಶೇಷವಾದ ಕಾರಣವೇನಾದರೂ ಇದ್ದರೆ ಮೊದಲನೆ ಸಾಲಿನಲ್ಲಿ ಇರಬೇಕಾದಂಥವರು ಇಲ್ಲದಿದ್ದರೆ ಪರವಾಗಿಲ್ಲ. ಶ್ರೀ ಎಂ.ಪಿ ಪ್ರಕಾಶ್‌ರವರನ್ನು ಬಿಟ್ಟು ಮೊದಲನೆ ಸಾಲಿನಲ್ಲಿ ಯಾರು ಇಲ್ಲವೆಂದರೆ ಇದನ್ನು ಹೇಗೆ ಸರಿ ಮಾಡಿಸುವುದು? ನಾನು ಈಗ Zero hourನಲ್ಲಿ ಪ್ರಸ್ತಾಪ ಮಾಡುವಂಥ ವಿಷಯ, ನನಗೇನು ಭಯ ಗೊತ್ತಾ ಸಾರ್...

ಅಧ್ಯಕ್ಷರು: ಕೆಲವು ಮಂತ್ರಿಗಳು ಆ ಮನೆಗೆ ಹೋಗಿದ್ದಾರೆ. ಕೆಲವರು ನನ್ನ ಪರ್ಮಿಷನ್ ತೆಗೆದುಕೊಂಡು ಬೇರೆ ಬೇರೆ ಕಡೆ ಹೋಗಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಪರ್ಮಿಷನ್ ಕೊಟ್ಟಿದ್ದರೆ ಪರವಾಗಿಲ್ಲ ಸಾರ್..

ಅಧ್ಯಕ್ಷರು: ಇದು Zero hour ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಉಳಿದವರು ಎಲ್ಲಿ ಹೋಗಿದ್ದಾರೆ ಸರ್?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಎಲ್ಲದಕ್ಕೂ ಒಬ್ಬರೇ ಮಂತ್ರಿಗಳು ಉತ್ತರ ಕೊಟ್ಟರೆ ಏನಿದು ಸರ್?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಬೇಕು ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸಚಿವ ಸಂಪುಟ ಎಂದರೆ ಈಗ ಮಾನ್ಯ ಎಂ.ಪಿ. ಪ್ರಕಾಶ್ ಒಬ್ಬರು ಮಾತ್ರವೆ? ಎಲ್ಲಾ ವಿಚಾರಕ್ಕೆ ಪಾಪ ಅವನ್ನು ಕರಕೊಂಡು ಎಲ್ಲದಕ್ಕೂ ಕೊಡಿ, ಎಲ್ಲದಕ್ಕೂ ಕೊಡಿ ಎಂದರೆ ಎಲ್ಲದಕ್ಕೂ ತಯಾರಾಗಿದ್ದರೆ ಪರಿಸ್ಥಿತಿ ಏನು?

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರಕಾಶ್‌ರವರೆ, ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಬೇಕಾದಂಥ ನೀವು ಇಲ್ಲಿದ್ದೀರಿ. ಆದರೆ ಹುಟ್ಟುಹಬ್ಬ ಆಗಿ ಎಷ್ಟೋ ತಿಂಗಳು ಕಳೆದು ಹೋದಂಥ ಒಬ್ಬ ಸಚಿವರು ಸಹ ಮುಂದಿನ ಸಾಲಿನಲ್ಲಿ ಇಲ್ಲ. ನಾನು ಹೇಳುವುದೇನೆಂದರೆ, ಇದನ್ನು ಹಗುರವಾಗಿ ನಾವು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಪ್ರಕಾಶ್‌ರವರೆ, ಈ ಸದನಕ್ಕೆ ಗೌರವವಿದೆ. ಒಂದು ಸತ್‌ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದೇವೆ. ಯಾರೋ ಒಬ್ಬರು ಇಬ್ಬರು ಸಚಿವರು ಇಲ್ಲದಿದ್ದರೆ ನಮಗೆ ಅರ್ಥವಾಗುತ್ತದೆ ಮುಂದಿನ ಸಾಲಿನ ಯಾವುದೇ ಕ್ಯಾಬಿನೆಟ್ ಸಚಿವರು ಇಲ್ಲಿ ಇಲ್ಲ ಎನ್ನುವುದಾದರೆ Zero hourನಲ್ಲಿ ಯಾರಿಗೆ ಈ ಕರ್ಮಕತೆಯನ್ನು ಹೇಳುತ್ತಿದ್ದೇವೆ ಸ್ವಾಮಿ? ಈ ರಾಜ್ಯದ ಜ್ವಲಂತ ಸಮಸ್ಯೆಗಳು ಕಿವಿಗೆ ಬಿದ್ದ ತಕ್ಷಣ ಆ ಕ್ಷೇತ್ರದ ವಿಷಯಗಳನ್ನು ಪ್ರಸ್ತಾಪ ಮಾಡುವಂಥ ಪ್ರಯತ್ನ ಮಾಡಿದರೆ, Zero hourನಲ್ಲಿ ಪ್ರಸ್ತಾಪ ಮಾಡುವಂಥ ದಿಢೀರ್ ಎಂದು ಉತ್ತರ ಕೊಡಬೇಕೆಂದು ನಾವು ಅಪೇಕ್ಷೆ ಪಡುವುದೂ ಇಲ್ಲ ಮಾನ್ಯ ಸಚಿವರೆ, ಕೊನೆಯ ಪಕ್ಷ ಸಂಬಂಧ ಪಟ್ಟ ಸಚಿವರು ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಇದ್ದರೆ ಅವರ ಕಿವಿಗೆ ನಾವು ಹೇಳಿದ ವಿಷಯ ಅವರ ಗಮನಕ್ಕೆ ಹೋಗುತ್ತದೆ, ಏನೇ ಕ್ರಮ ತೆಗೆದುಕೊಳ್ಳೂತ್ತಾರೆಂದು ಆಸೆ ಇಟ್ಟುಕೊಂಡು ಈಬಾರಿ Zero hourನಲ್ಲಿ ಪ್ರಸ್ತಾಪ ಮಾಡುತ್ತೇವೆ. ದಯಮಾಡಿ ನಾನು ಮಾನ್ಯ ಉಪಾಧ್ಯಕ್ಷರಿಗೆ ವಿನಂತಿ ಮಾಡುತ್ತೇನೆ. ದಯಮಾಡಿ ಅವರಿಗೆ ಹೇಳಿ. ಅವರ ಕಷ್ಟ ಏನು ಎಂದು ವಿಚಾರಿಸಿ ಸ್ವಾಮಿ. ಇಲ್ಲದಿದ್ದರೆ ಅವರೆಲ್ಲ ಕಷ್ಟ ಸುಖ ವಿಚಾರಿಸಿಕೊಂಡು ಬಂದ ಮೇಲೆ

ಬೇಕಾದರೆ ಒಂದೆರಡು ದಿನ ಸದನ ಮುಂದೂಡಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಬಂದು ನಂತರ ಬೇಕಾದರೆ ಸೇರೋಣ. ಆದರೆ ಈ ತರಹ ಕಾರ್ಯಕಲಾಪ ನಡೆಸುವುದು ಇದು ಶೋಭೆ ತರುವಂಥದ್ದಲ್ಲ ಎಂದು ಇಷ್ಟು ಮಾತ್ರ ಹೇಳಬಲ್ಲೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿರುವಂಥ ವಿಷಯ ನಿಜವಾಗಿಯೂ ಕೂಡ ಸರಿಯಾದದ್ದೆ. ನಾವು ಬಹಳ ಜನ ಇರಬೇಕಾದದ್ದೆ, ಕೆಲವರು ಮಾತ್ರ ಮಾನ್ಯ ಸ್ಪೀಕರ್ ರವರ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಈಗ ಮುಖ್ಯ ಸಚೇತಕರಾದ ಶ್ರೀ ಅಭಯಚಂದ್ರರವರು ಹೋಗಿದ್ದಾರೆ. ಏನೋ ಅನ್ಯ ಕಾರಣಗಳಿಗಾಗಿ ಕೆಲವು ಸಚಿವರು ಇಲ್ಲದೇ ಇರಬಹುದು. ನಾನು ಅದಕ್ಕೆ ವಿಷಾದ ವ್ಯಕ್ತಮಾಡಿಸುತ್ತೇನೆ. ಮತ್ತೆ ಘನತೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನೆಲ್ಲ ಖಂಡಿತವಾಗಿಯೂ ಮಾಡುತ್ತೇವೆ. ಇನ್ನು ಮಾನ್ಯ ಧ್ರುವನಾರಾಯಣರವರು ಪ್ರಸ್ತಾಪ ಮಾಡಿದಂಥ ವಿಷಯಕ್ಕೆ ಸಂಬಂಧಿಸಿದಂತೆ ನನಗಿದ್ದಂಥ ಮಾಹಿತಿ ಪ್ರಕಾರ 2003–04ರ ಸಾಲಿನಲ್ಲಿ ಮನೆಗಳಿಗೆ ಕೊಡಬೇಕಾಗಿರತಕ್ಕಂಥ ಹಣ ಏನಿದೆ, ಇದರ ವಿಚಾರದಲ್ಲಿ ಬಿಡುಗಡೆಯಾಗಿದೆ ಎನ್ನುವ ಮಾಹಿತಿ ನನಗಿದೆ. ಆದರ ಚಾಮರಾಜನಗರದ 45 ಲಕ್ಷ ರೂಪಾಯಿಗಳು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬಿಡುಗಡೆಯಾಗಿಲ್ಲ ಎನ್ನುವುದನ್ನು..

ಶ್ರೀ ವಾಟಾಳ್ ನಾಗರಾಜ್: ಚಾಮರಾಜನಗರ ಮತ್ತು ಸಂತೇಮರಹಳ್ಳಿ ಹೀಗೆ ಎರಡೂ ಕ್ಷೇತ್ರಕ್ಕೆ ಎರಡು ವರ್ಷದಿಂದ ನಿಜಕ್ಕೂ ಬಿಡುಗಡೆಯಾಗಿಲ್ಲ, ಅರ್ಧಂಬರ್ಧ ಗೋಡೆ ಕಟ್ಟಿದ್ದಾರೆ. ಅದು ಕಿತ್ತು ಹೋಗಿದೆ. ಇನ್ನು ಸ್ವಲ್ಪ ದಿವಸ ಅಯಿತೆಂದರೆ ಆ ಗೋಡೆ ಕಟ್ಟಿರುವುದೂ ಸಹ ಗೊತ್ತಾಗುವುದಿಲ್ಲ. ಅ ಪರಿಸ್ಥಿತಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ರಾಜ್ಯ 224ಕ್ಷೇತ್ರಗಳಲ್ಲೂ ಅದೇ ಸ್ಥಿತಿ ಇದೆ.

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಇಷ್ಟು ಜನ ಮಂತ್ರಿಗಳೂ ಇಲ್ಲಿ ಇದ್ದಾರೆ. ಅವರಿಗೆ ಒಬ್ಬ ಹಿರಿಯ ಸಚಿವರು ಉತ್ತರ ಕೊಡುತ್ತಾರೆ. ಅವರಿಗೆ ಗೊತ್ತಿರಬೇಕು. ಇಲ್ಲಿ ಕುಳಿತಿರುವವರೆಲ್ಲ ಹಿರಿಯ ಸಚಿವರಲ್ಲವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಚಿಂತನೆ ಮಾಡಬೇಕು. ಹೊಸ ಮನೆಗಳನ್ನು ಕಟ್ಟಬೇಕಾಗುತ್ತದೆ. ಈಗ ಹಳೆ ಮನೆಗಳನ್ನು ಕಟ್ಟಿಸಿಕೊಂಡಿರುವವರಿಗೆ ಹಣ ಬಿಡುಗಡೆ ಮಾಡಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಇಲ್ಲಿ ಹಿರಿಯ ಸಚಿವರು ಇದ್ದಾರೆ. ಎಲ್ಲರೂ ಇಲ್ಲಿ ಇಲ್ಲ ಅಷ್ಟೆ. ಅಲ್ಲಿ ಕೌನ್ಸಿಲ್ ನಲ್ಲಿ ಇರುತ್ತಾರೆ. ಇದು ತಮಗೂ ಗೊತ್ತಿರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, 2003–04ರ ಸಾಲಿಗೆ ಹಣ ಬಿಡುಗಡೆಯಾಗಿದೆ ಎನ್ನತಕ್ಕಂಥ ಮಾಹಿತಿ ನನಗಿದೆ. ಅಕಸ್ಮಾತ್ ನಿಮ್ಮ ಕ್ಷೇತ್ರಗಳಿಗೆ ಅಥವಾ ಬೇರೆ ಕ್ಷೇತ್ರಗಳಿಗೆ ಹಣ ಹೋಗಿಲ್ಲ ಎನ್ನತಕ್ಕಂಥದ್ದು ಇದ್ದರೆ ಮಾನ್ಯ ವಸತಿ ಮಂತ್ರಿಗಳೂ ಬಂದ ಕೂಡಲೇ ಸಾಯಂಕಾಲ ಯಾವ ಯಾವ ಕ್ಷೇತ್ರಗಳಿಗೆ ಹಣ ಬಿಡುಗಡೆಯಾಗಿದೆ ಎಂದು ತಮಗೆ ಉತ್ತರವನ್ನು ಸಹ ಕೊಡುತ್ತಾರೆ ಮತ್ತು ನೀವು ಹೇಳಿದಂಥ ರೀತಿಯಲ್ಲಿ ಸರ್ಕಾರ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ಈಗ ಬಿಪಿಎಲ್ ಕಾರ್ಡ್ ಬಗ್ಗೆ ಸರಿಯಾದ ರೀತಿಯ ಸಮೀಕ್ಷೆ ನಡೆದಿಲ್ಲ. ನನ್ನ ಕ್ಷೇತ್ರದಲ್ಲಿ ತೋಟ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಬಿಪಿಎಲ್. ಕಾರ್ಡ್ ವಿತರಣೆಯಾಗಿಲ್ಲ. ಅಷ್ಟಲ್ಲದೆ, ನಾವು ಗಮನಿಸಿದ ರೀತಿಯಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಕೇಂದ್ರ ಸರ್ಕಾರ 500 ರೂಪಾಯಿಗಳಿಗೆ ಟೆಲಿಫೋನ್ ಕೊಟ್ಟಿದೆ. ಮತ್ತು ಒಂದು ರೂಪಾಯಿಗೆ ಸಹ ಟೆಲಿಫೋನ್ ಕೊಟ್ಟಿದೆ. ಹಾಗಾಗಿ ಕಡು ಬಡವರು ಫೋನ್ ತೆಗೆದುಕೊಳ್ಳುವಂಥ ಒಂದು ಅವಕಾಶ ಸಿಕ್ಕಿ ಅದರಂತೆ ಫೋನ್ ತೆಗೆದುಕೊಂಡರು. ಇನ್ನು ಮುಂದೆಯೂ ಸಹ ಅಂಥ ಅವಕಾಶಗಳನ್ನು ಸರ್ಕಾರ ಕೊಡಬಹುದು. ಅವಾಗ ಫೋನನ್ನು ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎನ್ನುವ ಒಂದು ಪ್ರಶ್ನೆ ಬಂದಿದೆ. ಏಕೆಂದರೆ ಒಂದು ರೂಪಾಯಿ ಕಾಯಿನ್ ಕಟ್ಟಿದವರಿಗೂ ಕೂಡ ನಿಮ್ಮ ಬಿಲ್ ಗಳನ್ನು ಪಾವತಿ ಮಾಡಿ ಈಗ ತೆಗೆದುಕೊಳ್ಳಿ ಎಂದು ಹೇಳಿದರು. ಇದರಿಂದಾಗಿ ಕಡು ಬಡವರು ಸಹ ಫೋನ್ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಿತ್ತು. ದಯಮಾಡಿ ಫೋನ್ ಇಟ್ಟುಕೊಂಡವರಿಗೂ ಕೂಡ ಬಿಪಿಎಲ್ ಪಟ್ಟಿಯಲ್ಲಿ ಕೊಡಬೇಕೆನ್ನುವುದನ್ನು ಸರ್ಕಾರ ಅವಕಾಶ ಮಾಡಿಕೊಡಬೇಕು. ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಕಾಫಿ ತೋಟದಲ್ಲಿ ಕಾರ್ಮಿಕರ ಕೊರತೆ ಬಂದಿದೆ ಎಂದು ಬಂದಿದೆ ಏಕೆಂದರೆ, ಬಿಪಿಎಲ್ ಕಾರ್ಡ್ ಸಿಗಲಿಲ್ಲವೆಂದು ಎಲ್ಲ ಕಾಮಿಕರೂ ಕೆಲಸ ಬಿಟ್ಟು ಬರುತ್ತಿದ್ದಾರೆ. ಹೀಗಾಗಿ, ಅವರ ಹೊಟ್ಟೆ ಮೇಲೆ ಹೊಡೆಯುವುದು ಬೇಡ. ದಯಮಾಡಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿ, ಈಗೇನು ಟೆಲಿಫೋನ್ ಇದ್ದವರಿಗೆ ಇಲ್ಲವೆಂದು ಇದೆಯಲ್ಲ ಆ ನೀತಿಯನ್ನು ಸಡಿಲಿಸಬೇಕು. ಮತ್ತೆ, ತೋಟ ಕಾರ್ಮಿಕರಿಗೆ ಕಡ್ಡಾಯವಾಗಿ ಬಿಪಿಎಲ್ ಕಾರ್ಡ್ ಅನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.